ವಿತ್ತ ಸಂಚಿಕೆ
FEBRUARY 2025

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ಪಾಲಕರು ನಿಮ್ಮ ತುರ್ತು ನಿಧಿಯಲ್ಲ. ಮಕ್ಕಳು ನಿಮ್ಮ ನಿವೃತ್ತಿ ನಿಧಿಯಲ್ಲ. ನಿಮ್ಮದೇ ಸಂಪತ್ತಿನ ಸೌಧ ಕಟ್ಟಿ.

–ಎಲಾನ್ ಮಸ್ಕ್



ಗೆಲುವಿಗೆ ಪ್ರತಿಭೆ ಬೇಕು ಎನ್ನುವುದು ನಿಜ. ಆದರೆ ಅದೇ ಗೆಲುವನ್ನು ಮತ್ತೆ ಮತ್ತೆ ಗೆಲ್ಲಲು ವ್ಯಕ್ತಿತ್ವ ಬೇಕು.

–ಜಾನ್ ವುಡೆನ್

ನಾವು ಜನರನ್ನು ಅರ್ಥ ಮಾಡಿಕೊಂಡಿಲ್ಲ ಎಂದಾದರೆ ಉದ್ಯಮವನ್ನೂ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ.

–ಸಿಮೋನ್ ಸಿನೆಕ್



# ನಿಮ್ಮ ಕುಟುಂಬಕ್ಕೆ ಬೇಕು ಹಣಕಾಸಿನ ಅಮೂಲ್ಯ ಗಿಫ್ಟ್

**ನಮ್ಮ** ಪ್ರೀತಿಪಾತ್ರರಿಗಾಗಿ ಅತ್ಯಂತ ಕಕ್ಕುಲಾತಿಯಿಂದ ಕೆಲವು ಉಡುಗೊರೆಗಳನ್ನು ಖರೀದಿ ಮಾಡಿದ್ದೇವೆ ಎಂದಿಟ್ಟುಕೊಳ್ಳೋಣ. ಅಂತಹ ಗಿಫ್ಟ್‌ಗಳ ಪೆಟ್ಟಿಗೆ ತೆರೆದಾಕ್ಷಣ ಅವರ ಕಣ್ಣುಗಳಲ್ಲಿ ಅರಳುವ ಖುಷಿಯ ಮೆರವಣಿಗೆಯನ್ನು ಕಂಡು ಉಲ್ಲಸಿತರಾಗುತ್ತೇವೆ. ಅದು ಸಹಜ ಕೂಡ. ಆದರೆ ಈ ಬಾರಿ ಅಂತಹ ಭೌತಿಕ ಸಂಗತಿಗಳಿಗಿಂತ ಆಚೆ ಯೋಚನೆ ಮಾಡೋಣ.ನಿಮ್ಮ ಕುಟುಂಬಕ್ಕೆ ಇನ್ನೂ ಅರ್ಥ ಪೂರ್ಣವಾದ, ಮುಂಬರುವ ವರ್ಷಗಳಲ್ಲಿ ಅವರ ಭವಿಷ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ವಿಭಿನ್ನವಾದ ಗಿಫ್ಟ್ ಕೊಡಬಹುದೇ ಎಂದು ಯೋಚಿಸಿ.

ಕೇವಲ ಮೂರ್ತರೂಪದ ಉಡುಗೊರೆಗಳನ್ನು ಕೊಡುವ ಬಗ್ಗೆ ಯೋಚಿಸುವುದನ್ನು ಬಿಟ್ಟುಬಿಡಿ. ಅವರ ಹಣಕಾಸು ಯೋಗಕ್ಷೇಮದ ಬಗ್ಗೆ ಯಾಕೆ ಹೂಡಿಕೆ ಮಾಡಲು ಯೋಚನೆ ಮಾಡಬಾರದು?

ಒಂದು ಸಂಗತಿಯನ್ನು ನೆನಪಿಡಿ; ಇದು ಕೇವಲ ಒಂದಷ್ಟು ಹಣವನ್ನು ಹೂಡಿಕೆ ಮಾಡುವುದಲ್ಲ. ಬದಲಾಗಿ ನಿಮ್ಮ ಪ್ರೀತಿಪಾತ್ರರ ಭವಿಷ್ಯದ ಸುದೀರ್ಘ ಪಯಣಕ್ಕೆ ಬೇಕಾದ ಗಟ್ಟಿ ನೆಲಗಟ್ಟನ್ನು ನಿರ್ಮಿಸುವ ಕೆಲಸ. ನಿಮ್ಮ ಗೈರುಹಾಜರಿಯಲ್ಲಿಯೂ ಅವರ ಕಣ್ಣುಗಳಿಂದ ಆನಂದಭಾಷ್ಪ ಕರಗದಂತೆ



ನೋಡಿಕೊಳ್ಳುವ ಗುರುತರ ಜವಾಬ್ದಾರಿ.ಈ ಹೊಣೆಯನ್ನು ಅರಿತು ಈಗಿನಿಂದಲೇ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿರೆಂದಾದರೆ ನಿಮ್ಮ ಕುಟುಂಬವನ್ನು ಕಣ್ಣಿಗೆ ಕಾಣದ ಸವಾಲುಗಳಿಂದ ರಕ್ಷಿಸಿದಂತಾಗುವುದು ಮಾತ್ರವಲ್ಲದೆ ಪ್ರತಿಯೊಬ್ಬರಿಗೂ ಸುಭದ್ರ ಮತ್ತು ಸಮೃದ್ಧ ಭವಿಷ್ಯಕ್ಕೆ ಬುನಾದಿಹಾಕಿದಂತಾಗುತ್ತದೆ.

ಹಾಗಾದರೆ ಉತ್ತಮ ಹಣಕಾಸು ಭವಿಷ್ಯಕ್ಕಾಗಿ ದಿಟ್ಟ ಮತ್ತು ದೃಢವಾದ ಹೆಜ್ಜೆಗಳನ್ನು ಇಡುವುದು ಹೇಗೆ? ಹಂತಹಂತವಾಗಿ ತಿಳಿದುಕೊಳ್ಳೋಣ ಬನ್ನಿ.

**1.ಅಗತ್ಯಗಳನ್ನು ಗುರುತಿಸಿ:** ನೀವು ಮಾಡಬೇಕಾದ ಮೊದಲ ಕೆಲಸವೆಂದರೆ ನಿಮ್ಮ ಕುಟುಂಬದ ನಿರ್ದಿಷ್ಟ ಅಗತ್ಯಗಳಿಗೆ ಟಿಕ್ ಮಾರ್ಕ್ ಹಾಕುವುದು. ಪ್ರತಿಯೊಂದು ಕುಟುಂಬಕ್ಕೂ ಅಥವಾ ಪ್ರತಿಯೊಬ್ಬ ವ್ಯಕ್ತಿಗೂ ಭಿನ್ನ-ವಿಭಿನ್ನವಾದ ಹಣಕಾಸು ಗುರಿಗಳಿರುತ್ತವೆ. ಒಂದು ಕುಟುಂಬಕ್ಕೆ, ಒಬ್ಬ ವ್ಯಕ್ತಿಗೆ ಇರುವ ಗುರಿ ಇನ್ನೊಬ್ಬರಿಗೆ ಇರುವುದಿಲ್ಲ. ಅಂತಹ ನಿರ್ದಿಷ್ಟವಾದ ಗುರಿ ಮತ್ತು ಅಗತ್ಯಗಳನ್ನು ಗುರುತಿಸುವುದು ನಿಮ್ಮ ಎಲ್ಲ ಪ್ಲಾನ್‌ಗಳ ಬುನಾದಿಯಾಗಿರುತ್ತದೆ. ಮಗನ ಶಿಕ್ಷಣಕ್ಕೆ ಉಳಿತಾಯ ಮಾಡಬೇಕಾ? ಮನೆ ಖರೀದಿಸಬೇಕಾ ಅಥವಾ ಆರಾಮದಾಯಕ ನಿವೃತ್ತಿ ಜೀವನದ ಬಗ್ಗೆ ನಿಗಾ ಇಡಬೇಕಾ? ಇವು ಮೂಲಭೂತ ಪ್ರಶ್ನೆಗಳು.





ಹೂಡಿಕೆಗೆ ಬೇಕು ಸುರಕ್ಷಿತ ಕೀಲಿಕೈ




ನಿಮ್ಮ ಆರ್ಥಿಕ ಭದ್ರತೆಗೊಬ್ಬ ಪ್ರಾಣಮಿತ್ರ ಯುಲಿಪ್



ಇವುಗಳಿಗೆ ನೀವು ಉತ್ತರಗಳನ್ನು ಕಂಡುಕೊಳ್ಳಬೇಕು. ಹಾಗೆ ಮಾಡಿದರೆ ನಿಮ್ಮ ಹಣಕಾಸು ಅಗತ್ಯಗಳು ಮೂರೇ ಮೂರು ಕಾಲಾವಧಿಯ ಚೌಕಟ್ಟಿನೊಳಗೆ ಬಂದು ಫಿಟ್ ಆಗುತ್ತವೆ. ಅವುಗಳೆಂದರೆ; ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ.

- ಅಲ್ಪಾವಧಿ ಎಂದರೆ ಮುಂದಿನ ವರ್ಷವೇ ಸಾಧಿಸಬೇಕಾದ ಯೋಜನೆಗಳು. ಉದಾಹರಣೆಗೆ ಒಂದು ರಜಾಕಾಲದ ವಿಹಾರ ಅಥವಾ ಒಂದು ಹೊಸ ಸ್ಮಾರ್ಟ್‌ಫೋನ್ ಖರೀದಿ ಮಾಡುವುದು.

- ಮಧ್ಯಮಾವಧಿ ಎಂದರೆ ಮುಂದಿನ ಒಂದರಿಂದ ಐದು ವರ್ಷಗಳ ಅವಧಿಯಲ್ಲಿ ಸಾಧಿಸಬೇಕಾದ ಪ್ಲಾನ್. ಉದಾ: ಹೊಸ ಕಾರು ಖರೀದಿ ಅಥವಾ ಮನೆಯ ನವೀಕರಣ.

- ಸುದೀರ್ಘಾವಧಿ ಪ್ಲಾನ್ ಎಂದರೆ ಅದು ಯಾವತ್ತೂ ಸುದೀರ್ಘವೇ. ಅದು ಅನೇಕ ವರ್ಷಗಳಾಗಿರಬಹುದು ಅಥವಾ ದಶಕಗಳೇ ಆಗಿರಬಹುದು. ಅಂತಹ ಸುದೀರ್ಘ ಗುರಿಗಳಲ್ಲಿ: ಮನೆ ಖರೀದಿ, ನಿಮ್ಮ ಮಕ್ಕಳ ಶಿಕ್ಷಣಕ್ಕೆ ಹಣಕಾಸು ಅಥವಾ ನಿವೃತ್ತಿ ಜೀವನಕ್ಕೆ ಪ್ಲಾನ್ ಮಾಡುವುದು.

ಒಮ್ಮೆ ನೀವು ನಿಮ್ಮ ಅಗತ್ಯಗಳನ್ನು ಗುರುತಿಸಿದಿರಿ ಎಂದಾದರೆ ಅವುಗಳ ತುರ್ತು ಮತ್ತು ಮಹತ್ವದ ಆದಾರದಲ್ಲಿ ಪ್ರಾಶಸ್ತ್ಯ ನೀಡುವುದು ಸುಲಭವಾಗುತ್ತದೆ.

**2.ಹೂಡಿಕೆ–ಹಣದ ಕೆಲಸ ಶುರುವಾಗಲಿ:** ಒಮ್ಮೆ ನಿಮ್ಮ ಅಗತ್ಯಗಳನ್ನು ಗುರುತಿಸಿದರೆ ಇಂತಹ ಅಗತ್ಯಗಳನ್ನು ಪೂರೈಸಲು ಹೇಗೆ ಹೂಡಿಕೆ ಮಾಡಬೇಕು ಎಂದು ನಿರ್ಧರಿಸುವುದು ಮುಂದಿನ ಹಂತ. ನೀವು ಸುದೀರ್ಘ ಹಣಕಾಸಿನ ಅಗತ್ಯಗಳಿಗೆ ಗುರಿಯನ್ನು ನೆಟ್ಟಾಗ ಹೂಡಿಕೆ ಮಾಡುವುದು ಅತ್ಯಗತ್ಯ. ಅದರಿಂದ ನಿಮ್ಮ ಸಂಪತ್ತು ಬೆಳೆಯಲು ಅನುಕೂಲವಾಗುತ್ತದೆ. ಹಾಗಾದರೆ ಸರಿಯಾದ ಹೂಡಿಕೆಗೆ ಕಾರ್ಯತಂತ್ರ ರೂಪಿಸುವುದು ಹೇಗೆ? ಅದು ಸಂಪೂರ್ಣ ನಿಮ್ಮ ಸಮಯದ ಮಿತಿ (ಅಲ್ಪಾವಧಿ, ಮಧ್ಯಮಾವಧಿ ಅಥವಾ ದೀರ್ಘಾವಧಿ), ರಿಸ್ಕ್‌ಗಳನ್ನು ಸಹಿಸಿಕೊಳ್ಳುವ ಶಕ್ತಿ ಮತ್ತು ಹಣಕಾಸು ಸಾಮರ್ಥ್ಯವನ್ನು ಅಲವಂಬಿಸಿದೆ. ಅಲ್ಪಾವಧಿ ಅಗತ್ಯ ಎಂದರೆ ಅದು ಹೆಚ್ಚು–ಕಮ್ಮಿ ಸಾಂಪ್ರದಾಯಿಕ ಹೂಡಿಕೆಗಳಾಗಿರುತ್ತವೆ. ಅಂದರೆ ಉಳಿತಾಯ ಖಾತೆಗಳು, ಬಾಂಡ್‌ಗಳು ಅಥವಾ ಹಣಕಾಸು ಮಾರುಕಟ್ಟೆ ಫಂಡ್‌ಗಳು ಇದರಲ್ಲಿ ಸೇರಿವೆ. ಇದರಿಂದ ಬಂಡವಾಳವನ್ನು ಕಾಪಿಟ್ಟುಕೊಳ್ಳಲು ಮತ್ತು ಮಾರುಕಟ್ಟೆಯ ಪಲ್ಲಟಗಳನ್ನು ತಪ್ಪಿಸಬಹುದಷ್ಟೇ. ದೀರ್ಘಾವಧಿ ಅಗತ್ಯಗಳಾದ ನಿವೃತ್ತಿ ಯೋಜನೆಗೆ ಹೆಚ್ಚು ಆಕ್ರಮಣಕಾರಿ ಹೂಡಿಕೆ ಬೇಕಾಗುತ್ತದೆ (ಷೇರು ಅಥವಾ ರಿಯಲ್ ಎಸ್ಟೇಟ್). ಇವುಗಳಲ್ಲಿ ಆದಾಯ ಹೆಚ್ಚು. ಆದರೆ ರಿಸ್ಕ್ ಕೂಡ ಅಧಿಕ. ಇನ್ನೊಂದು ಆಯ್ಕೆಯೆಂದರೆ ಮುಚ್ಯುಯಲ್ ಫಂಡ್‌ಗಳಲ್ಲಿ ಮಾಡುವ ಎಸ್‌ಐಪಿ. ಇದೊಂದು ಶಿಸ್ತುಬದ್ಧ ವಿಧಾನ. ಇದನ್ನು ಚಾಲ್ತಿಯಲ್ಲಿಟ್ಟುಕೊಂಡರೆ ಶಿಕ್ಷಣ ಅಥವಾ ನಿವೃತ್ತಿ ಯೋಜನೆಯನ್ನು ಸುಲಭವಾಗಿ ಮಾಡಬಹುದು.

**3.ನಿಮ್ಮ ಹೂಡಿಕೆಯ ನಡೆ:** ನಿಮ್ಮ ಬಳಿ ಇರುವ ಹೂಡಿಕೆಗಳನ್ನು ನಿಮ್ಮ ಆರ್ಥಿಕ ಅಗತ್ಯಗಳಿಗೆ ಅನುಗುಣವಾಗಿ ಮ್ಯಾಪ್ ಮಾಡುವುದು ನಿಮ್ಮ ಗುರಿಗಳನ್ನು ಸಾಧಿಸುವ ಸಾಧ್ಯತೆಯನ್ನು ಹೆಚ್ಚಿಸುವ ಪ್ರಮುಖ ಹಂತವಾಗಿದೆ. ಹೂಡಿಕೆಗಳನ್ನು ನಿಮ್ಮ ನಿರ್ದಿಷ್ಟ ಆರ್ಥಿಕ ಅಗತ್ಯಗಳಿಗೆ ಅನುಗುಣವಾಗಿ ಮ್ಯಾಪ್ ಮಾಡುವ ಮೂಲಕ, ಪ್ರತಿ ಹೂಡಿಕೆಗೆ ಸ್ಪಷ್ಟ ಉದ್ದೇಶವಿದೆ ಎಂದು ನೀವು ಖಚಿತಪಡಿಸಿಕೊಳ್ಳುತ್ತೀರಿ. ಈ ವಿಧಾನದಿಂದ ನಿಮ್ಮ ಮೈಲಿಗಲ್ಲುಗಳು ಮತ್ತು ಟೈಮ್‌ಲೈನ್‌ಗಳು ನಿಮ್ಮ ನಿಯಂತ್ರಣದಲ್ಲಿಯೇ ಇವೆ ಎಂಬುದನ್ನು ಸಾಬೀತುಪಡಿಸುತ್ತದೆ.ಇದರಿಂದ ನೀವು ನಿಮ್ಮ ಗಮನದಿಂದ, ಆದ್ಯತೆಯಿಂದ ದೂರ ಸರಿದಿಲ್ಲ ಎಂಬುದು ಖಾತರಿಯಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನೀವು ಮಾಹಿತಿಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲು, ಕಾರ್ಯತಂತ್ರ ರೂಪಿಸಲು ಸಾಧ್ಯವಾಗುತ್ತದೆ. ಇದರಿಂದ ಆತುರದ ಅಥವಾ ಭಾವನಾತ್ಮಕ ಆಯ್ಕೆಗಳಿಗೆ ಜೋತುಬಿದ್ದು ನಿಮ್ಮ ಗುರಿಗಳನ್ನು ತಲುಪಲು ಸಾಧ್ಯವಾಗದೇ ಪರಿತಪಿಸುವುದು ತಪ್ಪುತ್ತದೆ.

**4.ಪ್ರಗತಿಯ ಜಾಡು ಹಿಡಿದು:** 'ಹಣ ಹೂಡಿ–ಮರೆತು ಬಿಡಿ' ಎಂಬ ಧೋರಣೆ ಯಾವ ಹೂಡಿಕೆದಾರನಿಗೂ ಶೋಭೆಯಲ್ಲ. ಒಮ್ಮೆ ಹೂಡಿಕೆಯ ಆಯ್ಕೆಗಳನ್ನು ಮಾಡಿಕೊಂಡಿರೆಂದರೆ ಅದನ್ನು ನಿಯಮಿತವಾಗಿ ಟ್ರ್ಯಾಕ್ ಮಾಡುವುದು ಅತ್ಯಗತ್ಯ. ಹಾಗೆ ಮಾಡುವುದರಿಂದ ನಿಮ್ಮ ಹೂಡಿಕೆ ಸರಿಯಾದ ಹಾದಿಯಲ್ಲಿದೆ ಮತ್ತು ಅದು ನಿಮ್ಮ ಅಗತ್ಯಗಳನ್ನು ಪೂರೈಸುತ್ತಿದೆ ಎಂಬುದು ಖಾತರಿಯಾಗಬೇಕು. ಇದಕ್ಕೆ ಅಗತ್ಯವಾದ ಆನ್‌ಲೈನ್ ಸಾಧನಗಳು ಮತ್ತು ಆ್ಯಪ್‌ಗಳು ನಿಮ್ಮ ಸಹಾಯಕ್ಕೆ ಬರುತ್ತವೆ. ಇದರಿಂದ ನಿಮ್ಮ ಹಣಕಾಸು ಸ್ಥಿತಿಯ ಬಗ್ಗೆ ಮೌಲ್ಯಯುತವಾದ ಒಳನೋಟವನ್ನು ಒದಗಿಸುತ್ತದೆ. ಕಾಲ ಸರಿಯುತ್ತಿದ್ದ ಹಾಗೆ ಕೆಲವು ಹೂಡಿಕೆಗಳು ಉಳಿದವನ್ನು ಮೀರಿ ಮುಂದೆ ಸಾಗಬಹುದು. ಅದರಿಂದಾಗಿ ನಿಮ್ಮ ಪೋರ್ಟ್‌ಫೋಲಿಯೋದ ಮೂಲ ಹಂಚಿಕೆಯಲ್ಲಿ ಬದಲಾವಣೆ ಮಾಡಿಕೊಳ್ಳುವ ಅಗತ್ಯ ಬರಬಹುದು.

**5.ತುರ್ತಿಗೊಂದು ನಿಧಿ ಇರಲಿ:** ಬದುಕಿನಲ್ಲಿ ದಿನಗಳು ಹೀಗೇ ಇರುತ್ತವೆ ಎಂದು ಯಾರೂ ಬರೆದಿಡಲು ಸಾಧ್ಯವಿಲ್ಲ. ಅದು ಅನಿಶ್ಚಿತ. ದಿಢೀರ್ ಅಂತ ಅನಿರೀಕ್ಷಿತ ವೆಚ್ಚಗಳು ಬಂದುಬಿಡಬಹುದು. ಘಟನೆಗಳು ಸಂಭವಿಸಿ ಬಿಡಬಹುದು. ಅದರಿಂದ ಉಂಟಾದ ವೆಚ್ಚಗಳು ನಿಮ್ಮ ಬಜೆಟ್‌ನ್ನೆಲ್ಲ ಕರಗಿಸಿಹಾಕಬಹುದು. ಅದಕ್ಕಾಗಿ ನಿಮ್ಮ ಕುಟುಂಬಕ್ಕೊಂದು ಮೀಸಲು ನಿಧಿಯನ್ನು ಕಾಯ್ದಿಡುವುದು ಉತ್ತಮ.ಅನಿರೀಕ್ಷಿತ ವೆಚ್ಚಗಳಿಗೆಂದೇ ಈ ಹಣವನ್ನು ಎತ್ತಿಡಿ. ಅವು ನಿಮ್ಮ ವೈದ್ಯಕೀಯ ಬಿಲ್‌ಗಳಿಗೆ, ಕಾರು ರಿಪೇರಿ ಅಥವಾ ಉದ್ಯೋಗ ನಷ್ಟದಂತಹ ವೆಚ್ಚಗಳನ್ನು ಸರಿದೂಗಿಸುವಲ್ಲಿ ಸಹಾಯ ಮಾಡುತ್ತವೆ. ಒಂದು ಗಟ್ಟಿಯಾದ ತುರ್ತು ನಿಧಿಯನ್ನು ಹೊಂದುವುದು ಹಣಕಾಸು ಸ್ಥಿರತೆಯ ಮೂಲಭೂತ ಅಂಶ. ಇದು ಅನಿಶ್ಚಿತ ಕಾಲಘಟ್ಟದಲ್ಲಿ ಮಾನಸಿಕ ನೆಮ್ಮದಿಯನ್ನು ಕೊಡುತ್ತದೆ. ಇಂತಹ ತುರ್ತು ನಿಧಿಯಲ್ಲಿ ನಿಮ್ಮ ಮೂರರಿಂದ ಆರು ತಿಂಗಳ ವೆಚ್ಚಕ್ಕಾಗುವಷ್ಟು ಹಣವನ್ನು ಎತ್ತಿಡುವುದು ಸೂಕ್ತ ಎಂದು ಸಾಮಾನ್ಯವಾಗಿ ಹಣಕಾಸು ತಜ್ಞರು ಸಲಹೆ ಮಾಡುತ್ತಾರೆ. ನಿಯಮಿತವಾದ ಆದಾಯ ಇಲ್ಲದೇ ಇರುವವರು ಅಥವಾ ಇನ್ನೊಬ್ಬರನ್ನು ಅವಲಂಬಿತರಾಗಿರುವವರು ಇಂತಹ ಆರು ತಿಂಗಳ ವೆಚ್ಚದ ತುರ್ತುನಿಧಿ ಇದ್ದರೆ ನೆಮ್ಮದಿಯಿಂದ ನಿಟ್ಟುಸಿರು ಬಿಡಬಹುದು.ಈ ತುರ್ತುನಿಧಿಯನ್ನು ಸುರಕ್ಷಿತ ಖಾತೆಯಲ್ಲಿಡಬೇಕು. ಅದು ಉಳಿತಾಯ ಖಾತೆಯಾಗಿರಬಹುದು, ಮಾರುಕಟ್ಟೆಯ ಹಣದ ಖಾತೆಯಾಗಿರಬಹುದು ಅಥವಾ ಅಲ್ಪಾವಧಿಯ ಬ್ಯಾಂಕ್ ಠೇವಣಿಯೂ ಆಗಿರಬಹುದು. ಇಂತಹ ಖಾತೆಗಳು ತುರ್ತು ಸಂದರ್ಭದಲ್ಲಿ ಯಾವುದೇ ಚಿಂತೆಗೆ ಅವಕಾಶವಿಲ್ಲದೆ ಕೈಗೊಂದಿಷ್ಟು ಹಣವನ್ನು ತಂದುಕೊಡಬಲ್ಲದು ಮತ್ತು ಒಂದಷ್ಟು ಬಡ್ಡಿ ಹಣವನ್ನೂ ದಕ್ಕಿಸಿಕೊಡಬಲ್ಲದು.

**6.ಭರಪೂರ ವಿಮಾ ಕವರೇಜ್:** ಹಣಕಾಸು ಭದ್ರತೆಗೆ ವಿಮೆ ಅತ್ಯಂತ ನಿರ್ಣಾಯಕ. ಅಗೋಚರ ವಿದ್ಯಮಾನಗಳ ಸಂದರ್ಭದಲ್ಲಿ ಉಂಟಾಗುವ ಹಣಕಾಸು ಸಂಕಷ್ಟದಿಂದ ನಿಮ್ಮ ಪ್ರೀತಿಪಾತ್ರರನ್ನು ಇದು ಪಾರುಮಾಡಬಲ್ಲದು.ನಿಮ್ಮ ಜೀವನ ಮತ್ತು ಆರೋಗ್ಯ ಎರಡಕ್ಕೂ ಸೂಕ್ತ ವಿಮಾ ಕವರೇಜ್ ಹೊಂದಿರುವುದು ಅತ್ಯಗತ್ಯ.ಕುಟುಂಬದ ಯಜಮಾನ ಯಾವತ್ತೂ ಸಾಕಷ್ಟು ವಿಮಾ ಸೌಲಭ್ಯವನ್ನು ಹೊಂದಿರಬೇಕು. ಹಾಗೆ ಮಾಡದೇ ಇದ್ದರೆ ನಿಮ್ಮ ಮಕ್ಕಳು ಮತ್ತು ಅವಲಂಬಿತರನ್ನು ಗಂಡಾಂತರಕ್ಕೆ ದೂಡಿದಂತೆಯೇ ಸರಿ. ಅದೇ ರೀತಿ ಆರೋಗ್ಯ ವಿಮೆ ಅಷ್ಟೇ ನಿರ್ಣಾಯಕ.ಇತ್ತೀಚಿನ ದಿನಮಾನಗಳಲ್ಲಿ ಆರೋಗ್ಯ ಸಂಬಂಧಿ ವೆಚ್ಚಗಳು ಕ್ಷಿಪ್ರಗತಿಯಲ್ಲಿ ಏರುತ್ತಲೇ ಸಾಗಿವೆ. ಜೊತೆಗೆ ನಮ್ಮ ಜೀವನ ಶೈಲಿಯಲ್ಲಿಯೂ ಬದಲಾವಣೆ ಉಂಟಾಗಿರುವುದರಿಂದ ಆರೋಗ್ಯದ ಸಮಸ್ಯೆಯೂ ಹೆಚ್ಚುತ್ತಿದೆ. ಕುಟುಂಬದ ಎಲ್ಲರಿಗೆ ಸಮಗ್ರ ಆರೋಗ್ಯ ವಿಮೆ ಮಾಡಿಸಿರದೇ ಇದ್ದರೆ ನಿಮ್ಮ ಹಣಕಾಸಿನ ಆರೋಗ್ಯವೇ ಅಪಾಯದಲ್ಲಿದೆ ಎಂದು ಅರ್ಥ.

**ಬಾಟಮ್‌ಲೈನ್:** ಅಂತಿಮವಾಗಿ ನಿಮ್ಮ ಕುಟುಂಬದ ಭವಿಷ್ಯದ ಮೇಲೆ ಮಾಡುವ ಹೂಡಿಕೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಅದು ಕೇವಲ ಸಂಪತ್ತನ್ನು ಕ್ರೋಡೀಕರಿಸುವ ಕಸರತ್ತಲ್ಲ. ಬದಲಾಗಿ ನೀವು ನಿಮ್ಮ ಇಡೀ ಕುಟುಂಬಕ್ಕೆ ನೀಡುವ ಹಣಕಾಸಿನ ಸ್ಥಿರತೆ. ಅವರ ಭವಿಷ್ಯವನ್ನು ಸುಭದ್ರಗೊಳಿಸಲು, ಕನಸುಗಳನ್ನು ಬೆಂಬತ್ತಿ ಹೋಗಲು ನೀವು ಅವರಿಗೆ ಮಾಡಿಕೊಡುವ ಅವಕಾಶ. ಅದು ಹಣಕಾಸು ಭದ್ರತೆಯ ಗಿಫ್ಟ್‌ನ್ನು ನೀವು ಅವರಿಗೆ ನೀಡಿದಂತೆ. ಜೊತೆಗೆ ನಿಮ್ಮ ಪ್ರೀತಿಪಾತ್ರರ ಬದುಕಿನಲ್ಲಿ ತರುವ ಪರಿವರ್ತನೆ ಕೂಡ ಹೌದು.

# ಹೂಡಿಕೆಗೆ ಬೇಕು ಸುರಕ್ಷಿತ ಕೀಲಿಕೈ



**ನಿಮ್ಮ** ಸಂಪತ್ತು ಸಂಪದ್ಭರಿತವಾಗಿ ಬೆಳೆಯಬೇಕಾದರೆ, ಹಣಕಾಸು ಭದ್ರತೆಯನ್ನು ರೂಪಿಸಬೇಕಿದ್ದರೆ ಮತ್ತು ನಿವೃತ್ತಿ, ಶಿಕ್ಷಣ ಅಥವಾ ಮನೆ ಖರೀದಿಯಂತಹ ಸುದೀರ್ಘಾವಧಿಯ ಅಗತ್ಯಗಳನ್ನು ಸಾಧಿಸಬೇಕಿದ್ದರೆ ಹೂಡಿಕೆ ಮಾಡುತ್ತಿರಬೇಕು. ಆದರೆ ಹೂಡಿಕೆ ಎನ್ನುವುದು ಸುಖಾಸುಮ್ಮನೇ ದಕ್ಕುವ ಬಾಬತ್ತಲ್ಲ. ಪ್ರತೀ ಹೂಡಿಕೆಯ ಬಗಲಲ್ಲೊಂದು ರಿಸ್ಕ್ ಫ್ಯಾಕ್ಟರ್ ಇದ್ದೇ ಇರುತ್ತದೆ.'ಹೂಡಿಕೆ ಯಾವತ್ತೂ ಮಾರುಕಟ್ಟೆ ರಿಸ್ಕ್‌ಗೆ ಒಳಪಟ್ಟಿದೆ' ಎಂಬ ಎಚ್ಚರಿಕೆಯ ಗಂಟೆಯನ್ನು ಪ್ರತಿ ಹೂಡಿಕೆಯ ಸಂದರ್ಭದಲ್ಲಿಯೂ ನಮ್ಮ ಕಣ್ಣೆದುರಿಗೆ ಕಾಣುವ ಘೋಷ ವಾಕ್ಯ.

ನಿಮ್ಮ ಇಡೀ ಹೂಡಿಕೆ ಪ್ರಕ್ರಿಯೆಯಲ್ಲಿ ಅತ್ಯಂತ ನಿರ್ಣಾಯಕ ಅಂಶವೇನೆಂದರೆ ರಿಸ್ಕ್‌ಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅದನ್ನು ನಿಭಾಯಿಸುವುದು. ಅದರಿಂದ ನೀವು ಯಾವುದೇ ನಿರ್ಧಾರಗಳನ್ನು ಕೈಗೊಂಡರೂ ಎಚ್ಚ-ರಿಕೆಯಿಂದ ವರ್ತಿಸಲು ಸಾಧ್ಯವಾಗುತ್ತದೆ ಮತ್ತು ಅಂತಿಮವಾಗಿ ಹಣಕಾಸು ಯೋಗಕ್ಷೇಮವನ್ನು ಗಟ್ಟಿಗೊಳಿಸಿದಂತಾಗುತ್ತದೆ. ಹೂಡಿಕೆಯಲ್ಲಿ ಇರುವ ನಾನಾ ರೀತಿಯ ರಿಸ್ಕ್‌ಗಳು ಯಾವುವು ಎಂಬುದನ್ನು ಈ ಲೇಖನದ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

**ಹೂಡಿಕೆ ರಿಸ್ಕ್ ಅಂದರೆ ಏನು:** ಸರಳವಾಗಿ ಹೇಳಬೇಕೆಂದರೆ ನೀವು ಮಾಡುವ ಪ್ರಧಾನ ಹೂಡಿಕೆಯಲ್ಲಿ ಸಂಭವಿಸಬಹುದಾದ ನಷ್ಟ. ಹೂಡಿಕೆ ಮೇಲಿನ ನಿರೀಕ್ಷಿತ ಆದಾಯದ ಜೊತೆ ತಳಕುಹಾಕಿಕೊಂಡಿರುವುದು ಅನಿಶ್ಚಿತತೆ ಕೂಡ. ನೀವು ಷೇರುಮಾರುಕಟ್ಟೆ, ಬಾಂಡ್‌ಗಳು, ರಿಯಲ್ ಎಸ್ಟೇಟ್ ಅಥವಾ ಸರಕುಗಳಲ್ಲಿ ಹೂಡಿಕೆ ಮಾಡಿ. ಎಲ್ಲದರಲ್ಲಿಯೂ ರಿಸ್ಕ್ ಇದ್ದೇ ಇರುತ್ತದೆ. ಆದರೆ ಅವುಗಳಲ್ಲಿ ನಾನಾ ವಿಧಗಳಿವೆ. ಹಾಗಾಗಿ ಈ ನಾನಾ ರೀತಿಯ ರಿಸ್ಕ್‌ಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವು ಮಾಡುವ ಪರಿಣಾಮಗಳ ಮೌಲ್ಯಮಾಪನ ಮಾಡುವುದು ಹಾಗೂ ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದು ಮುಖ್ಯ.

**"Investments are subject to market risk"**

**ನೀವು ಹೂಡಿಕೆ ಮಾಡಲು ಮುಂದಾದಾಗ ಇಂತಹುದೊಂದು 'ಘೋಷ ವಾಕ್ಯ' ಎದ್ದು ಕಾಣುತ್ತದೆ. ಜೀವನದ ಯಾವ ಕೆಲಸದಲ್ಲೇ ಆಗಲಿ, ರಿಸ್ಕ್ ಇಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಪ್ರತಿಯೊಂದು ಯಶಸ್ಸು ಕೂಡ ರಿಸ್ಕ್‌ಗಳೆಂಬ ಮೆಟ್ಟಿಲುಗಳನ್ನು ಹತ್ತಿ ಮುಂದೆ ಸಾಗಿದಾಗ ಮಾತ್ರ ಸಿಗುವುದು. ಹಾಗಾಗಿ ರಿಸ್ಕ್ ಇದೆ ಅಂದಾಕ್ಷಣ ಹೆಜ್ಜೆ ಹಿಂದೆ ಇಡಬೇಕಾದ ಅಗತ್ಯವೇನೂ ಇಲ್ಲ. ಹೂಡಿಕೆ ಪ್ರಕ್ರಿಯೆಯಲ್ಲಿಯೂ ಇದು ಅನ್ವಯ. ಸುರಕ್ಷಿತ ಹೂಡಿಕೆ ಪ್ರಕ್ರಿಯೆಯ ಕೀಲಿಕೈ ಇರುವುದು ರಿಸ್ಕ್‌ಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ. ಅದನ್ನು ಅರ್ಥಮಾಡಿಕೊಂಡರೆ ಎಚ್ಚರಿಕೆಯಿಂದ ವರ್ತಿಸಲು ಸಾಧ್ಯವಾಗುತ್ತದೆ ಮತ್ತು ಅಂತಿಮವಾಗಿ ಹಣ-ಕಾಸು ಯೋಗಕ್ಷೇಮವನ್ನು ಗಟ್ಟಿಗೊಳಿಸಿದಂತಾಗುತ್ತದೆ. ಹೂಡಿಕೆಯಲ್ಲಿ ಇರುವ ನಾನಾ ರೀತಿಯ ರಿಸ್ಕ್‌ಗಳು ಯಾವುವು ಎಂಬುದನ್ನು ಈ ಲೇಖನದ ಮೂಲಕ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ.**

**1. ವ್ಯವಸ್ಥಿತ ರಿಸ್ಕ್ (ಮಾರುಕಟ್ಟೆ ರಿಸ್ಕ್):** ನಿಮ್ಮ ಹೂಡಿಕೆಯನ್ನು ಕಾಡುವ ಪ್ರಾಥಮಿಕ್ ರಿಸ್ಕ್ ಇದು. ದೇಶದ ಆರ್ಥಿಕ ಸ್ಥಿತಿಗತಿಗಳು, ರಾಜಕೀಯ ವಿದ್ಯಮಾನಗಳು ಮತ್ತು ಹೂಡಿಕೆದಾರರ ಮನೋಭಾವನೆಯಂತಹ ಅಂಶಗಳಿಂದಾಗಿ ಮಾರುಕಟ್ಟೆಯಲ್ಲಿ ಉಂಟಾಗುವ ಪಲ್ಲಟವೇ ರಿಸ್ಕ್‌ಗೆ ಕಾರಣ. ನಿಮ್ಮ ಪೋರ್ಟ್‌ಫೋಲಿಯೊದಲ್ಲಿ ಬಂಡವಾಳ ವಿತರಣೆ ಮಾಡುವುದ-ರಿಂದ ಈ ವ್ಯವಸ್ಥಿತ ರಿಸ್ಕ್‌ನ್ನು ತಗ್ಗಿಸಲು ಸಾಧ್ಯವಿಲ್ಲ. ಈ ವ್ಯವಸ್ಥಿತ ರಿಸ್ಕ್‌ನಲ್ಲಿರುವ ಕೆಲವು ಉದಾಹರಣೆಗಳನ್ನು ನೋಡೋಣ:

**ಬೆಲೆ ರಿಸ್ಕ್:** ಆಸ್ತಿ ಮಾರುಕಟ್ಟೆಯ ಬೆಲೆಯಲ್ಲಿ ಉಂಟಾಗುವ ಸಂಭವನೀಯ ಏರಿಳಿತದಿಂದಾಗಿ ನಿಮ್ಮ ಹೂಡಿಕೆಯ ಮೌಲ್ಯದಲ್ಲಿ ನಷ್ಟ ಸಂಭವಿಸಬಹುದು ಅಥವಾ ಅದರ ಮೌಲ್ಯ ತಗ್ಗಬಹುದು.

**ಹಣದುಬ್ಬರದ ರಿಸ್ಕ್:** ಇದು ನಿಮ್ಮ ಹೂಡಿಕೆ ಆದಾಯದ ಖರೀದಿ ಮಾಡುವ ಶಕ್ತಿಯನ್ನು ಕರಗುವಂತೆ ಮಾಡುತ್ತದೆ. ಉದಾಹರಣೆಗೆ

ಹಣದುಬ್ಬರವು ನಿಮ್ಮ ಹೂಡಿಕೆಯಿಂದ ಬಂದ ಆದಾಯವನ್ನು ಮೀರಿದ್ದರೆ ನಿಮ್ಮ ನಿಜವಾದ ಆದಾಯ (ಹಣದುಬ್ಬರಕ್ಕೆ ಸರಿದೂಗಿಸಿದ ಬಳಿಕ ಬಂದ ಆದಾಯ) ಯಾವುದೇ ಪ್ರಯೋಜನಕ್ಕೆ ಬರುವುದಿಲ್ಲ.

**ಬಡ್ಡಿದರದ ರಿಸ್ಕ್:** ಬಡ್ಡಿದರದಲ್ಲಿ ಉಂಟಾಗುವ ಬದಲಾವಣೆಗಳು ನಿಮ್ಮ ಬಾಂಡ್‌ಗಳ ಮೌಲ್ಯ ಮತ್ತು ಇತರ ನಿಶ್ಚಿತ ಆದಾಯದ ಹೂಡಿಕೆಗಳ ಮೌಲ್ಯವನ್ನು ತಗ್ಗಿಸಲಿದೆ.ಬಡ್ಡಿ ದರದಲ್ಲಿ ಏರಿಕೆ ಉಂಟಾದ ಹಾಗೆ ಈಗಿರುವ ಬಾಂಡ್‌ಗಳ ಮೌಲ್ಯ ಕುಸಿಯುತ್ತದೆ. ಯಾಕೆಂದರೆ ಹೂಡಿಕೆದಾರರು ಹೊಸ ಬಾಂಡ್‌ಗಳಿಂದ ಅಧಿಕ ಆದಾಯವನ್ನು ನಿರೀಕ್ಷೆಮಾಡುತ್ತಿರುತ್ತಾರೆ.

**2. ವ್ಯವಸ್ಥಿತವಲ್ಲದ ರಿಸ್ಕ್ (ಕಂಪನಿ/ಉದ್ಯಮ ನಿರ್ದಿಷ್ಟವಾದ ರಿಸ್ಕ್):** ಇದು ಯಾವುದೋ ಕಂಪನಿ ಅಥವಾ ಕೈಗಾರಿಕೋದ್ಯಮವನ್ನು ಅವಲಂಬಿಸಿದ್ದಾಗಿದೆ. ಉದಾಹರಣೆಗೆ, ಆಡಳಿತ ಮಂಡಳಿಯ ಕಳಪೆ ನಿರ್ಧಾರಗಳಿಂದ, ಉತ್ಪನ್ನಗಳನ್ನು ಹಿಂದಕ್ಕೆ ಪಡೆದುಕೊಳ್ಳುವುದರಿಂದ ಅಥವಾ ನಿಯಂತ್ರಣ ದಂಡಗಳ ಕಾರಣದಿಂದ ಕಂಪನಿಯ ಷೇರಿನಲ್ಲಿ ಕುಸಿತ ಉಂಟಾಗಬಹುದು. ಬಂಡವಾಳ ವಿತರಣೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ಇಂತಹ ವ್ಯವಸ್ಥಿತವಲ್ಲದ ರಿಸ್ಕ್ ಪ್ರಮಾಣವನ್ನು ತಗ್ಗಿಸಲು ಸಾಧ್ಯವಿದೆ.

**3. ಸಾಲದ ರಿಸ್ಕ್:** ಇದು ಬಾಂಡ್‌ಗಳು ಮತ್ತು ಡಿಬೆಂಚರ್‌ಗಳಂತಹ ನಿಶ್ಚಿತ–ಆದಾಯದ ಸೆಕ್ಯುರಿಟಿಗಳ ಜೊತೆಗೆ ತಳಕು ಹಾಕಿಕೊಂಡಿರುವ ಒಂದು ರೀತಿಯ ಹೂಡಿಕೆ ರಿಸ್ಕ್. ಅಂದರೆ ಒಬ್ಬ ಸಾಲಗಾರ (ಉದಾಹರಣೆಗೆ, ಒಂದು ಕಂಪನಿ ಅಥವಾ ಸರ್ಕಾರ ಮಾಡಿದ ಸಾಲ) ತನ್ನ ಹಣಕಾಸು ಬಾಧ್ಯತೆಗಳನ್ನು ಪೂರೈಸುವಲ್ಲಿ ವಿಫಲವಾದರೆ ಅದರಿಂದ ನಷ್ಟ ಉಂಟಾಗುವುದು ಹೂಡಿಕೆದಾರರಿಗೆ. ಕಡಿಮೆ ಕ್ರೆಡಿಟ್ ರೇಟಿಂಗ್‌ನ್ನು ಹೊಂದಿರುವ ಸಾಲಗಾರರು ಸುಸ್ತಿದಾರರಾಗುವ ಸಾಧ್ಯತೆ ಇರುತ್ತದೆ.ಇದರಿಂದ ಅಸಲು ಮತ್ತು ಬಡ್ಡಿ ಪಾವತಿಗಳ ನಷ್ಟಕ್ಕೆ ದಾರಿಮಾಡಿಕೊಡಬಹುದು.

**4.ಲಿಕ್ವಿಡಿಟಿ ರಿಸ್ಕ್:** ಮಾರುಕಟ್ಟೆಯಲ್ಲಿ ಖರೀದಿದಾರರು ಮತ್ತು ಮಾರಾಟಗಾರರ ಕೊರತೆಯಿಂದ ನೀವು ಸುಲಭವಾಗಿ ಹೂಡಿಕೆಯ ಖರೀದಿ ಅಥವಾ ಮಾರಾಟಮಾಡಲು ಸಾಧ್ಯವಾಗದೇ ಇರುವುದರಿಂದ ಈ ರಿಸ್ಕ್ ಉಂಟಾಗುತ್ತದೆ. ರಿಯಲ್ ಎಸ್ಟೇಟ್ ಅಥವಾ ಖಾಸಗಿ ಈಕ್ವಿಟಿಯಂತಹ ನಿಯಮಿತವಾಗಿ ಟ್ರೇಡ್ ಆಗದ ಆಸ್ತಿಗಳಿಂದ ಇದು ಸಂಭವಿಸುತ್ತದೆ.



**5.ಮರುಹೂಡಿಕೆ ರಿಸ್ಕ್:** ಮಾಡಿದ ಹೂಡಿಕೆಯ ಮುಂದುವರಿಕೆ ಕ್ರಮವಾಗಿ ಆದಾಯದ ಅಧಿಕ ದರಕ್ಕೆ ಸರಿಯಾಗಿ ಮರುಹೂಡಿಕೆ ಮಾಡಲು ಸಾಧ್ಯವಾಗದೇ ಇದ್ದರೆ ಈ ರಿಸ್ಕ್ ಉಂಟಾಗುತ್ತದೆ. ಉದಾಹರಣೆಗೆ ಬಾಂಡ್ ಮೆಚ್ಯೂರ್ ಆದ ಬಳಿಕ ಮಾಡುವ ಮರುಹೂಡಿಕೆ.

## ಹೂಡಿಕೆ ರಿಸ್ಕ್ ನಿಭಾಯಿಸುವುದು ಹೇಗೆ?

**1.ಬಂಡವಾಳ ವಿತರಣೆ:** ನಾನಾ ಆಸ್ತಿ ವರ್ಗಗಳು, ಕೈಗಾರಿಕೋದ್ಯಮಗಳು ಮತ್ತು ಭೌಗೋಳಿಕ ವಲಯಗಳಲ್ಲಿ ನಿಮ್ಮ ಬಂಡವಾಳವನ್ನು ವಿತರಣೆ ಮಾಡುವುದರಿಂದ ರಿಸ್ಕ್‌ನ್ನು ಪರಿಣಾಮಕಾರಿಯಾಗಿ ತಗ್ಗಿಸಬಹುದು. ನಿಮ್ಮ ಹೂಡಿಕೆಗಳನ್ನು ನಾನಾ ವಲಯಗಳಲ್ಲಿ ವಿಸ್ತರಿಸುವುದರಿಂದ ಯಾವುದೋ ಒಂದು ಕ್ಷೇತ್ರದಲ್ಲಿ ಆಗಿರುವ ಕುಸಿತ ನಿಮ್ಮ ಒಟ್ಟಾರೆ ಪೋರ್ಟ್‌ಫೋಲಿಯೊ ಮೇಲೆ ಪರಿಣಾಮ ಬೀರುವುದಿಲ್ಲ.

**2.ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಎಸ್‌ಐಪಿ:** ಮಾರುಕಟ್ಟೆಯ ಪರಿಸ್ಥಿತಿ ಹೇಗೇ ಇರಲಿ, ಆಗಾಗ ಒಂದು ನಿಶ್ಚಿತ ಮೊತ್ತವನ್ನು ಒಂದು ಆಸ್ತಿವರ್ಗದಲ್ಲಿ ಹೂಡಿಕೆ ಮಾಡುವ ಕಾರ್ಯತಂತ್ರ ಇದಾಗಿದೆ. ಈ ಕ್ರಮದಿಂದ ಮಾರುಕಟ್ಟೆಯಲ್ಲಿ ಉಂಟಾಗುವ ಪಲ್ಲಟದ ಪರಿಣಾಮದಿಂದ ಪಾರಾಗಲು ಸಾಧ್ಯವಾಗುತ್ತದೆ ಮತ್ತು ಮಾರುಕಟ್ಟೆ ಪರಿಸ್ಥಿತಿ ಪೂರಕವಲ್ಲದೇ ಇದ್ದಾಗ ದೊಡ್ಡ ಪ್ರಮಾಣದ ಮೊತ್ತವನ್ನು ಹೂಡಿಕೆ ಮಾಡುವುದು ತಪ್ಪುತ್ತದೆ.

**3.ಮರುಹೊಂದಾಣಿಕೆ:** ಕಾಲಕ್ರಮೇಣ ನಿಮ್ಮ ಹೂಡಿಕೆ ನಿರ್ವಹಣೆಯು ನಿಮ್ಮ ಆಸ್ತಿ ಹಂಚಿಕೆಯಲ್ಲಿ ಬದಲಾವಣೆ ಉಂಟುಮಾಡಬಹುದು. ಹಾಗಾಗಿ ಆಗಾಗ ಮರುಹೊಂದಾಣಿಕೆ ಮಾಡುವುದರಿಂದ ನಿಮ್ಮ ಅಪೇಕ್ಷಿತ ಹಂಚಿಕೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

**4.ಸುದೀರ್ಘಾವಧಿ ದೃಷ್ಟಿಕೋನ:** ಯಾವತ್ತೂ ಸುದೀರ್ಘಾವಧಿ ಹೂಡಿಕೆಯನ್ನು ಕಾಯ್ದಿಟ್ಟುಕೊಳ್ಳುವುದು ಮತ್ತು ಅಲ್ಪಾವಧಿ ಮಾರುಕಟ್ಟೆ ಏರಿಳಿತದ ಆಧಾರದಲ್ಲಿ ಆತುರದ ನಿರ್ಧಾರ ಕೈಗೊಳ್ಳದೇ ಇರುವುದು ಮುಖ್ಯ.

**5.ವೃತ್ತಿಪರರ ಸಲಹೆ ಪಡೆಯಿರಿ:** ನಿಮ್ಮ ಹೂಡಿಕೆ ಯಾವ ದಿಕ್ಕಿನಲ್ಲಿ ಸಾಗಬೇಕು ಎನ್ನುವ ಮಾರ್ಗದರ್ಶನ ಪಡೆಯಲು ಅರ್ಹ ಹಣಕಾಸು ಸಲಹೆಗಾರರನ್ನು ಸಂಪರ್ಕಿಸಿ.

**ಬಾಟಮ್ ಲೈನ್:** ಹೂಡಿಕೆ ಎಂದರೆ ಅದರ ಜೊತೆಗೆ ರಿಸ್ಕ್ ಇದ್ದೇ ಇರುತ್ತದೆ. ಆದರೆ ಈ ರಿಸ್ಕ್‌ಗಳು ಯಾವುದು, ಅವುಗಳನ್ನು ನಿಭಾಯಿಸುವುದು ಹೇಗೆ ಎಂಬುದನ್ನು ಪರಿಣಾಮಕಾರಿಯಾಗಿ ಅರ್ಥ ಮಾಡಿಕೊಂಡರೆ ನಿಮ್ಮ ಹಣಕಾಸು ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ. ಸರಿಯಾದ ಜ್ಞಾನ ಸಂಪಾದನೆ, ಸೂಕ್ತ ಯೋಜನೆ ಮತ್ತು ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳುವುದರಿಂದ ಹೂಡಿಕೆಯಲ್ಲಿರುವ ರಿಸ್ಕ್‌ಗಳನ್ನು ಸುಲಭವಾಗಿ ದಾಟಬಹುದು. ನಿಮ್ಮ ಪೋರ್ಟ್‌ಫೋಲಿಯೋ ಇಂದೂ ಮುಂದೂ ನಿಮಗಾಗಿ ಕೆಲಸಮಾಡುವಂತೆ ಕಟ್ಟಿ ಬೆಳೆಸಬಹುದು.




# ನಿಮ್ಮ ಆರ್ಥಿಕ ಭದ್ರತೆಗೊಬ್ಬ ಪ್ರಾಣಮಿತ್ರ ಯುಲಿಪ್

**ಯೂನಿಟ್** ಲಿಂಕ್ಡ್ ಇನ್ಶೂರೆನ್ಸ್ ಪ್ಲಾನ್ (ULIP ಯುಲಿಪ್) ಒಂದು ಬಹುಮುಖ ಹಣಕಾಸು ಸಾಧನವಾಗಿದ್ದು ವಿಮಾ ಸೌಲಭ್ಯ ಮತ್ತು ಹೂಡಿಕೆಯ ಅವಕಾಶ ಎರಡನ್ನೂ ಸುಗಮವಾಗಿ ಸಂಯೋಜಿಸುತ್ತದೆ.ಸುರಕ್ಷತೆ ಮತ್ತು ಸಂಪತ್ತಿನ ಸೃಷ್ಟಿಯನ್ನು ಒಳಗೊಂಡಿರುವ ಹಣ-ಕಾಸು ಯೋಜನೆಯ ವಿಷಯದಲ್ಲಿ ಸಮಗ್ರ ವಿಧಾನವನ್ನು ಬಯಸುವ ವ್ಯಕ್ತಿಗಳಿಗೆ ಇದೊಂದು ಉತ್ತಮ ಆಯ್ಕೆಯಾಗಿದೆ.

ಯುಲಿಪ್‌ನ ಇನ್ನಷ್ಟು ಪ್ರಯೋಜನಗಳು ಏನು ಎಂಬುದನ್ನು ತಿಳಿದುಕೊಳ್ಳೋಣ:

**ಡಬಲ್ ಲಾಭ: ಪರಿಪೂರ್ಣ ಸಮತೋಲನ**

**ಜೀವಮಾನವಿಡೀ ಸೌಲಭ್ಯ:** ಯುಲಿಪ್ ಸುಭದ್ರವಾದ ಜೀವ ವಿಮಾ ಸೌಲಭ್ಯವನ್ನು ಒದಗಿಸುತ್ತದೆ. ಅನಿರೀಕ್ಷಿತ ಘಟನೆಗಳ ಸಂದರ್ಭದಲ್ಲಿ ನಿಮ್ಮ ಪ್ರೀತಿಪಾತ್ರರಿಗೆ ಹಣಕಾಸು ಭದ್ರತೆಯನ್ನು ಕಲ್ಪಿಸುತ್ತದೆ. ನಿಮ್ಮ ಕುಟುಂಬದ ಭವಿಷ್ಯವು ಸುರಕ್ಷಿತವಾಗಿರುವ ಕಾರಣ ಮಾನಸಿಕ ನೆಮ್ಮದಿಯನ್ನೂ ಒದಗಿಸುತ್ತದೆ.

ಸಾಮಾನ್ಯವಾಗಿ, ಯುಲಿಪ್‌ಗಳು ವಾರ್ಷಿಕ ಪ್ರೀಮಿಯಂನ 10 ರಿಂದ 100 ಪಟ್ಟು ಜೀವ ವಿಮಾ ಕವರೇಜ್ (ಒಟ್ಟು ಖಾತರಿ) ನೀಡುತ್ತವೆ. ನಿಖರವಾದ ಒಟ್ಟು ಖಾತರಿಯು ಪಾಲಿಸಿ ನಿಯಮಗಳನ್ನು ಅವಲಂಬಿಸಿರುತ್ತದೆ.

**ಮರಣ ನಂತರದ ಪ್ರಯೋಜನಗಳು:** ಸಾಮಾನ್ಯವಾಗಿ, ಯುಲಿಪ್‌ಗಳಲ್ಲಿ ಎರಡು ವಿಧಗಳಿವೆ.

**1ನೇ ವಿಧ** – ಇದರಲ್ಲಿ ಮರಣ ನಂತರದ ಲಾಭವು ಖಾತರಿಯಾದ ಮೊತ್ತ ಅಥವಾ ಫಂಡ್ ಮೌಲ್ಯ (ಹೂಡಿಕೆ ಆದಾಯ), ಯಾವುದು ಹೆಚ್ಚಿದೆಯೋ ಅದು.

**2ನೇ ವಿಧ** – ಇದರಲ್ಲಿ ಮರಣ ನಂತರದ ಲಾಭವು ಖಾತರಿಯಾದ ಮೊತ್ತ ಮತ್ತು ಫಂಡ್ ಮೌಲ್ಯ (ಹೂಡಿಕೆ ಆದಾಯ) ಇವೆರಡರ ಸಂಂ-ಯೋಜನೆಯಾಗಿರುತ್ತದೆ.

**ಹೂಡಿಕೆ ಪ್ರಗತಿ:** ನಿಮ್ಮ ಪ್ರೀಮಿಯಂನ ಗಣನೀಯ ಭಾಗವನ್ನು ಮಾರುಕಟ್ಟೆ-ಸಂಬಂಧಿತ ಫಂಡ್‌ಗಳ ವೈವಿಧ್ಯಮಯ ಶ್ರೇಣಿಯಲ್ಲಿ ಹೂಡಿಕೆ ಮಾಡಲಾಗುತ್ತದೆ. ಇದರಿಂದ ನೀವು ಮಾರುಕಟ್ಟೆಯ ಸಂಭಾವ್ಯ ಏರಿಕೆಯಲ್ಲಿ ಭಾಗಿಯಾಗಬಹುದು, ಇದು ಗಣನೀಯ ದೀರ್ಘಾವಧಿ ಸಂಪತ್ತಿನ ಬೆಳವಣಿಗೆಯನ್ನು ಗುರಿಯಾಗಿರಿಸುತ್ತದೆ.

**ತೆರಿಗೆ ದಕ್ಷತೆ: ಗರಿಷ್ಠ ಆದಾಯ**

**ಸೆಕ್ಷನ್ 80ಸಿ ಪ್ರಯೋಜನಗಳು:** ಯುಲಿಪ್‌ಗೆ ಪಾವತಿಸಿದ ಪ್ರೀಮಿಯಂಗಳು (ರೂ. 1.5 ಲಕ್ಷದವರೆಗೆ) ಆದಾಯ ತೆರಿಗೆ ಸೆಕ್ಷನ್ 80ಸಿ ಅಡಿಯಲ್ಲಿ ತೆರಿಗೆ ಕಡಿತಗಳಿಗೆ ಅರ್ಹವಾಗಿರುತ್ತವೆ, ಇದು ನಿಮ್ಮ ತೆರಿಗೆಯೋಗ್ಯ ಆದಾಯವನ್ನು ಕಡಿಮೆ ಮಾಡುತ್ತದೆ.ಅರ್ಹತೆ ಪಡೆಯಲು, ಏಪ್ರಿಲ್ 1, 2012ರ ನಂತರ ನೀಡಲಾದ ಪಾಲಿಸಿಗಳಿಗೆ ಪ್ರೀಮಿಯಂ ಖಾತರಿಯಾದ ಮೊತ್ತದ 10% ಅನ್ನು ಮೀರಬಾರದು.

**ಸೆಕ್ಷನ್10(10ಡಿ) ಅಡಿಯಲ್ಲಿ ತೆರಿಗೆ ರಹಿತ ಮೆಚ್ಯುರಿಟಿ:** ಯುಲಿಪ್‌ನಲ್ಲಿ ಪೂರ್ಣಗೊಂಡ ಅವಧಿ (ಮೆಚ್ಯುರಿಟಿ)ಗೆ ಸಾಮಾನ್ಯವಾಗಿ ತೆರಿಗೆ ಇರುವುದಿಲ್ಲ. ಇದರಿಂದಾಗಿ ನಿಮ್ಮ ಹೂಡಿಕೆಯ ಮೇಲೆ ಒಟ್ಟಾರೆ ಆದಾಯವನ್ನು ಇನ್ನಷ್ಟು ಹೆಚ್ಚುವಂತೆ ಮಾಡುತ್ತದೆ. ಇದಕ್ಕೆ ಅರ್ಹತೆಯನ್ನು ಪಡೆಯಲು ವಾರ್ಷಿಕ ಪ್ರೀಮಿಯಂ ಖಾತರಿ ಮೊತ್ತದ ಶೇ.10ರಷ್ಟನ್ನು ಮೀರಬಾರದು.

**ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆಯಿಂದ ವಿನಾಯ್ತಿ (LTCG):** ವಾರ್ಷಿಕ ಪ್ರೀಮಿಯಂ 2.5ಲಕ್ಷ ರೂ. ಮೀರದೇ ಇದ್ದರೆ (2021 ಫೆ. 21ರಿಂದ ಜಾರಿಗೆ ಬರುವಂತೆ)ಯುಲಿಪ್ ಮೆಚ್ಯು-ರಿಟಿ ತೆರಿಗೆ ವಿನಾಯ್ತಿ ಪಡೆಯುತ್ತದೆ.

**ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ:** ಈ ಸಂಬಂಧ ವಿವರವಾದ ಮಾಹಿತಿಯನ್ನು ಪಡೆದುಕೊಳ್ಳಲು ತೆರಿಗೆ ಸಲಹೆಗಾರರನ್ನು ಸಂಪರ್ಕಿಸುವುದು ಸೂಕ್ತ. ಇದರಿಂದ ತೆರಿಗೆ ನಿಬಂಧನೆಗಳು ಹೆಚ್ಚು ಸುಲಲಿತವಾಗುತ್ತವೆ.

**ಹೊಂದಾಣಿಕೆ ಮತ್ತು ನಿಯಂತ್ರಣ:** ನಿಮ್ಮ ಹೂಡಿಕೆ ಕಾರ್ಯತಂತ್ರವನ್ನು ರೂಪಿಸಿ.

**ಫಂಡ್‌ಗಳ ಆಯ್ಕೆ:** ಯುಲಿಪ್ ನಿಮಗೆ ವ್ಯಾಪಕ ಶ್ರೇಣಿಯ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಇದರಿಂದ ರಿಸ್ಕ್‌ಗಳನ್ನು ಅರಗಿಸಿಕೊಳ್ಳುವ ನಿಮ್ಮ ಸಾಮರ್ಥ್ಯ ಮತ್ತು ಹಣಕಾಸು ಗುರಿಗಳ ಆಧಾರದಲ್ಲಿ ನಿಮ್ಮದೇ ಆದ ಹೂಡಿಕೆ ಪೋರ್ಟ್‌ಫೋಲಿಯೊಗಳನ್ನು ಸಿದ್ಧಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.ನೀವು ಈಕ್ವಿಟಿ, ಡೆಟ್ ಅಥವಾ ಸಮತೋಲಿತವಾದ ವಿಧಾನವನ್ನು ಅನುಸರಿಸುತ್ತೀರೋ -ಆಯ್ಕೆಯ ಸ್ವಾತಂತ್ರ್ಯ ನಿಮಗೆ ಬಿಟ್ಟಿದ್ದಾಗಿದೆ.

**ಫಂಡ್ ಬದಲಾವಣೆ:** ಮಾರುಕಟ್ಟೆಯಲ್ಲಿನ ಪರಿಸ್ಥಿತಿಗಳು ಬದಲಾಗುತ್ತಿದ್ದಂತೆ ನಿಮ್ಮ ಹೂಡಿಕೆ ಕಾರ್ಯತಂತ್ರವನ್ನು ಬಳಸಿಕೊಳ್ಳಲು ಯುಲಿಪ್‌ನ ಒಳಗೇ ನಾನಾ ಫಂಡ್‌ಗಳ ನಡುವೆ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಇದ-ರಿಂದಾಗಿ ನಿಮ್ಮ ಬದಲಾಗುತ್ತಿರುವ ಹಣಕಾಸು

ಉದ್ದೇಶಗಳಿಗೆ ತಕ್ಕಂತೆ ಪೋರ್ಟ್‌ಫೋಲಿಯೊ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

**ದೀರ್ಘಾವಧಿ ಸಂಪತ್ತು ಸೃಷ್ಟಿ: ಬಲಿಷ್ಠ ಹಣಕಾಸು ಭವಿಷ್ಯ ನಿರ್ಮಾಣ**

**ಸಂಯೋಜನೆಯ ಶಕ್ತಿ:** ದೀರ್ಘಾವಧಿ ಹೂಡಿಕೆಯ ವ್ಯಾಪ್ತಿಯಲ್ಲಿ ನಿಮ್ಮ ಆದಾಯವನ್ನು ದುಪ್ಪಟ್ಟು ಮಾಡಿಕೊಳ್ಳಲು ಸಂಯೋಜನೆಯ ಶಕ್ತಿಯ ಅವಕಾಶವನ್ನು ಯುಲಿಪ್‌ನಲ್ಲಿ ಪಡೆದುಕೊಳ್ಳಬಹುದು. ಗಳಿಸಿದ್ದನ್ನೇ ಮರುಹೂಡಿಕೆ ಮಾಡಿಕೊಳ್ಳುವ ಮೂಲಕ ಕಾಲಾವಧಿಯಲ್ಲಿ ನಿಮ್ಮ ಹೂಡಿಕೆಗಳನ್ನು ಗಣನೀಯವಾಗಿ ಹೆಚ್ಚಿಸಿಕೊಳ್ಳಬಹುದು.

**ಮಾರುಕಟ್ಟೆ ಸಂಬಂಧಿ ಆದಾಯ:** ಸಾಂಪ್ರದಾಯಿಕ ನಿಶ್ಚಿತ ಆದಾಯದ ಸಾಧನಗಳಿಗೆ ಹೋಲಿಸಿದರೆ ಮಾರುಕಟ್ಟೆ ಸಂಬಂಧಿ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದರಿಂದ ಅಧಿಕ ಆದಾಯವನ್ನು ಗಳಿಸಲು ಸಾಧ್ಯವಿದೆ. ಈಕ್ವಿಟಿ ಮಾರುಕಟ್ಟೆಗೆ ಸಂಬಂಧಿಸಿದ ಈ ಅವಕಾಶದಿಂದಾಗಿ ನಿಮ್ಮ ಸಂಪತ್ತು ಸೃಷ್ಟಿಯ ಸಾಧ್ಯತೆ ದ್ವಿಗುಣಗೊಳ್ಳುತ್ತದೆ.

**ಹೆಚ್ಚುವರಿ ವಿಶೇಷತೆಗಳು: ನಿಮ್ಮ ಹಣಕಾಸು ಟೂಲ್‌ಕಿಟ್‌ನ ಬಳಕೆ**

**ಪ್ರೀಮಿಯಂ ಟಾಪ್–ಅಪ್‌ಗಳು:** ಕೆಲವು ಯುಲಿಪ್‌ಗಳಲ್ಲಿ ಪಾಲಿಸಿಯ ಅವಧಿಯಲ್ಲಿ ಗ್ರಾಹಕರು ಹೆಚ್ಚುವರಿ ಫಂಡ್‌ಗಳನ್ನು ಹೂಡಿಕೆ ಮಾಡಬಹುದು. ಇವುಗಳನ್ನು ಪ್ರೀಮಿಯಂ ಟಾಪ್–ಅಪ್ ಎಂದು ಕರೆಯುತ್ತೇವೆ. ಪಾಲಿಸಿಯನ್ನು ಅವಲಂಬಿಸಿ ಇದು ಖಾತರಿ ಮೊತ್ತವನ್ನು ಹೆಚ್ಚಿಸಬಹುದು.

**ಭಾಗಶಃ ವಿದ್‌ಡ್ರಾವಲ್:** ಅನೇಕ ಯುಲಿಪ್‌ಗಳಲ್ಲಿ ನಿಮ್ಮ ಕೆಲವು ನಿರ್ದಿಷ್ಟ ಹಣಕಾಸು ಅಗತ್ಯಗಳನ್ನು ಪೂರೈಸಿಕೊಳ್ಳಲು ಭಾಗಶಃ ವಿದ್‌ಡ್ರಾವಲ್‌ಗೆ ಅವಕಾಶವಿರುತ್ತದೆ. ಇದರಿಂದ ನಿಮ್ಮ ದೀರ್ಘಾವಧಿ ಹೂಡಿಕೆ ಗುರಿಗಳಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ.

**ಮಾಹಿತಿಪೂರ್ಣ ನಿರ್ಧಾರ ಕೈಗೊಳ್ಳಲು ಗಮನಿಸಬೇಕಾದ ಪ್ರಮುಖ ಅಂಶಗಳು:** ಯುಲಿಪ್‌ನಲ್ಲಿ ಹೂಡಿಕೆ ಮಾಡುವುದಕ್ಕೂ ಮೊದಲು ಈ ಕೆಳಗಿನ ಕೆಲವು ಅಂಶಗಳನ್ನು ಎಚ್ಚರಿಕೆಯಿಂದ ಪರಿಗಣಿಸುವುದು ಬಹಳ ಮುಖ್ಯ.

**ರಿಸ್ಕ್ ಸಹಿಸುವ ಸಾಮರ್ಥ್ಯ:** ಸೂಕ್ತವಾದ ಫಂಡ್ ಆಯ್ಕೆ ಮಾಡಿಕೊಳ್ಳಲು ಅದರಲ್ಲಿ ಅಡಕವಾಗಿರುವ ರಿಸ್ಕ್‌ಗಳನ್ನು ಜೀರ್ಣಿಸಿಕೊಳ್ಳುವ ಶಕ್ತಿ ನಿಮಗಿದೆಯೇ ಎಂದು ಪರಿಶೀಲಿಸಿ.

**ಹಣಕಾಸು ಗುರಿಗಳು:** ನಿಮ್ಮ ದೀರ್ಘಾವಧಿ ಹಣಕಾಸು ಉದ್ದೇಶಗಳಿಗೆ ತಕ್ಕಂತೆ ಹೂಡಿಕೆ ಕಾರ್ಯತಂತ್ರವನ್ನು ರೂಪಿಸಿ.

**ಲಾಕ್–ಇನ್ ಅವಧಿ:** ಯುಲಿಪ್‌ಗೆ ಸಾಮಾನ್ಯವಾಗಿ ಐದು ವರ್ಷಗಳ ಲಾಕ್–ಇನ್ ಅವಧಿ ಕಡ್ಡಾಯವಾಗಿ ಇರುತ್ತದೆ. ಹಾಗಾಗಿ ನೀವು ಮೊದಲ ಐದು ವರ್ಷಗಳ ಕಾಲ ನಿಮ್ಮ ಪಾಲಿಸಿ ಸರೆಂಡರ್ ಮಾಡುವುದಾಗಲಿ ಅಥವಾ ವಿದ್‌ಡ್ರಾ ಮಾಡುವುದಾಗಲಿ ಸಾಧ್ಯವಿರುವುದಿಲ್ಲ.

**ವೆಚ್ಚಗಳು ಮತ್ತು ಶುಲ್ಕಗಳು:** ಯುಲಿಪ್‌ನೊಂದಿಗೆ ಇರುವ ಅನೇಕ ರೀತಿಯ ಶುಲ್ಕಗಳ ಬಗ್ಗೆ ಲೆಕ್ಕಾಚಾರ ಮಾಡಿ; ಪ್ರೀಮಿಯಂ ಹಂಚಿಕೆ ಶುಲ್ಕಗಳು, ಫಂಡ್ ನಿರ್ವಹಣೆ ಶುಲ್ಕಗಳು ಮತ್ತು ಪಾಲಿಸಿ ನಿರ್ವಹಣೆ ಶುಲ್ಕಗಳು ಇತ್ಯಾದಿ.

**ಹಣಕಾಸು ಸಲಹೆಗಾರರನ್ನು ಸಂಪರ್ಕಿಸಿ:** ಇಂತಹ ವಿಚಾರಗಳಲ್ಲಿ ನೀವು ಸರಿಯಾದ ನಿರ್ಧಾರಗಳನ್ನು ಕೈಗೊಳ್ಳಬೇಕಾದರೆ ಅರ್ಹ ಹಣಕಾಸು ಸಲಹೆಗಾರರನ್ನು ಸಂಪರ್ಕಿಸುವುದು ಉತ್ತಮ. ಅವರು ನಿಮಗೆ ಅಗತ್ಯವಾದ ಮಾರ್ಗದರ್ಶನವನ್ನು ನೀಡುತ್ತಾರೆ. ಯುಲಿಪ್‌ನಲ್ಲಿರುವ ಸೂಕ್ಷ್ಮ ವ್ಯತ್ಯಾಸಗಳನ್ನು ನೀವು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ನಿಮ್ಮ ನಿರ್ದಿಷ್ಟ ಅಗತ್ಯಗಳಿಗೆ ಮತ್ತು ರಿಸ್ಕ್ ಸಹಿಸಿಕೊಳ್ಳುವ ಸಾಮರ್ಥ್ಯಕ್ಕೆ ತಕ್ಕ ಪ್ಲಾನ್ ಶಿಫಾರಸು ಮಾಡುತ್ತಾರೆ.

**ಬಾಟಮ್ ಲೈನ್:** ನೀವು ಹಾಕಿಕೊಂಡಿರುವ ಹಣಕಾಸು ಗುರಿಗಳು ಎಂಥವು, ನಿಮಗೆ ಆಗಬೇಕಾಗಿರುವ ಪ್ರಯೋಜನಗಳು ಯಾವುವು ಎಂಬುದನ್ನು ಎಚ್ಚರಿಕೆಯಿಂದ ಪರಿಶೀಲಿಸಿದರೆ ಯುಲಿಪ್‌ನ ಶಕ್ತಿಯ ಅಂದಾಜು ನಿಮಗಾಗುತ್ತದೆ. ಅದರಿಂದ ಬಲಿಷ್ಠವಾದ ಹಣಕಾಸು ಭವಿಷ್ಯವನ್ನು ನೀವು ರೂಪಿಸಿಕೊಳ್ಳಬಹುದು. ಒಂದು ಮಾತು ನೆನಪಿಡಿ, ಯುಲಿಪ್‌ನಿಂದ ನಿಮಗೆ ಗಮನಾರ್ಹವಾದ ಅವಕಾಶಗಳನ್ನು ದೊರೆಯುವುದರ ಜೊತೆಗೆ ಅದರಲ್ಲಿ ಮಾರುಕಟ್ಟೆ ರಿಸ್ಕ್‌ಗಳೂ ಒಳಗೊಂಡಿವೆ.


INSPIRE INDIA
WEALTH PVT LTD

ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಮ್ಯೂಚ್ಯುಯಲ್ ಫಂಡ್ | ಸ್ಟಾಕ್ ಬ್ರೋಕಿಂಗ್ | ಹಣಕಾಸು ಯೋಜನೆ | ರಿಯಲ್ ಎಸ್ಟೇಟ್ | ತೆರಿಗೆ ಉಳಿತಾಯ ಬಾಂಡ್ | ವಿಮೆ | ಸಂಪತ್ತಿನ ನಿರ್ವಹಣೆ | ಹಣಕಾಸಿನ ಮೌಲ್ಯಮಾಪನ | ತೆರಿಗೆ ಸಲ್ಲಿಕೆ | ವಿಲ್ ಬರವಣಿಗೆ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

**ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.**
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com

'ಯಶಸ್ಸಿನ ದಾರಿಯಲ್ಲಿ ನಡೆಯಬೇಕೆಂದರೆ ನಿಮ್ಮ ಸೋಲಿನ ಪ್ರಮಾಣವನ್ನು ಡಬಲ್ ಮಾಡಿಕೊಳ್ಳಿ'